ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 1 ರಿಂದ 7 ನೇ ಪ್ರತಿವಾದಿ ಪರ ಶ್ರೀ ಕೆ ಎಂ ಎಂ ವಕೀಲರಿಂದ:

ದಾವಾ ಅನುಸೂಚಿನ 1 ರಿಂದ 7 ಸ್ವತ್ತುಗಳು ನನ್ನ ಮುತ್ತಾತ ನ ಸ್ವತ್ತುಗಳು. ಸದರಿ ಸ್ವತ್ತುಗಳನ್ನು ನನ್ನ ಮುತ್ತಾತ ಯಾವಾ ಯಾರಿಂದ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಸ್ವತ್ತುಗಳು ಎಂದು ತೋರಿಸಲು ನ್ಯಾಯಾಲಯಕ್ಕೆ ನಾನು ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿಯ 1 ರಿಂದ 7 ಸ್ವತ್ತುಗಳು ನನ್ನ ಪಿತ್ರಾರ್ಜಿತ ಸ್ವತ್ತುಗಳು ಅಲ್ಲ ಅಂದರೆ ಸರಿಯಲ್ಲ.

ದಾವಾ ಅನುಸೂಚಿಯ 3 ರಿಂದ 5 ಸ್ವತ್ತುಗಳನ್ನು 1 ರಿಂದ 3 ಪ್ರತಿವಾದಿಗಳು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. 6 ನೇ ಪ್ರತಿವಾದಿ ಆಸ್ತಿ ಖರೀದಿಸಿದ ನಂತರ ಸರ್ಕಾರದಿಂದ ಅನುಮತಿ ಪಡೆದು ಅಲ್ಲಿ ನಿವೇಶನಗಳನ್ನು ಮಾಡಿದ್ದಾರೆ ಎಂದರೆ ಸರಿ. 6 ನೇ ಪ್ರತಿವಾದಿ ಸೈಟುಗಳನ್ನು ಸುಮಾರು 13 ಜನರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸೈಟುಗಳನ್ನು ಖರೀದಿಸಿದವರು ದಾವಾ ಅನುಸೂಚಿಯ 3 ರಿಂದ 5 ಸ್ವತ್ತುಗಳಲ್ಲಿರುವ ಸೈಟುಗಳ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿಯ 3 ರಿಂದ 5 ಸ್ವತ್ತುಗಳು 1 ರಿಂದ 3 ಪ್ರತಿವಾದಿಗಳ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿ.

ದಾವಾ ಅನುಸೂಚಿಯ 6 ಮತ್ತು 7 ನೇ ಸ್ವತ್ತುಗಳನ್ನು ಕೆ ಐ ಎ ಡಿ ಬಿ

ಅವರು ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದರೆ ಸರಿ. ಸದರಿ ಸ್ವತ್ತುಗಳು 1 ರಿಂದ 3 ಪ್ರತಿವಾದಿಗಳ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿ. ದಾವಾ ಅನುಸೂಚಿಯ ಐಟಂ ನಂ: 8 ಮತ್ತು 9 ಸ್ವತ್ತುಗಳನ್ನು 2 ಮೇತ್ತು 3ನೇ ಪ್ರತಿವಾದಿಗಳು ಯಾವಾಗ ಖರೀದಿಸಿದರು ಎಂದರೆ ಸಾಕ್ಷಿಯು 6ನೇ ಪ್ರತಿವಾದಿ ಆಸ್ತಿ ಖರೀದಿಸುವಾಗ ಕೊಟ್ಟ ಮುಂಗಡ ಹಣದಲ್ಲಿ ಖರೀದಿಸಿದ್ದು ಯಾವತ್ತು ಖರೀದಿಸಿದ್ದರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ಮತ್ತು 3ನೇ ಪ್ರತಿವಾದಿಗಳು ದಾವಾ ಅನುಸೂಚಿಯ 8 ಮತ್ತು 9 ನೇ ಐಟಂ ಸ್ವತ್ತುಗಳನ್ನು ಖರೀದಿಸುವಾಗ ನಾನು ಹೋಗಿರಲಿಲ್ಲ.

2 ಮತ್ತು 3ನೇ ಪ್ರತಿವಾದಿಗಳಿಗೆ ಟ್ರ್ಯಾಕ್ಟರ್ ಇತ್ತು ಎಂದರೆ ಸರಿ. ಸದರಿ ಟ್ರ್ಯಾಕ್ಟರ್ ನಿಂದ 2 ಮತ್ತು 3ನೇ ಪ್ರತಿವಾದಿಗಳಿಗೆ ಒಳ್ಳೆಯ ಸಂಪಾದನೆ ಇತ್ತು ಎಂದರೆ ಸರಿ. 2ನೇ ಪ್ರತಿವಾದಿ ವೆಳ್ಳಿಯಪ್ಪ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದು ಅವರಿಗೆ ಒಳ್ಳೆಯ ಸಂಪಾದನೆ ಇದ್ದು ಅವರೇ ಟ್ರ್ಯಾಕ್ಟರ್ ಖರೀದಿಸಿದ್ದರು ಎಂದರೆ ಸರಿಯಲ್ಲ. ಅವರಿಗೆ ಸಂಪಾದನೆ ಇರಲಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ವೆಳ್ಳಿಯಪ್ಪ ಬಟ್ಟೆ ಅಂಗಡಿಯಿಂದ ಕೆಲಸ ಮಾಡಿ ಬಂದ ಸಂಪಾದನೆ ಯಿಂದ ಟ್ರ್ಯಾಕ್ಟರ್ ಓಡಿಸಿ ಬಂದ ಸಂಪಾದನೆ ಯಿಂದ ದಾವಾ ಅನುಸೂಚಿಯ 8 ಮತ್ತು 9 ಸ್ವತ್ತುಗಳನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ.

ದಾವಾ ಅನುಸೂಚಿಯ 10ನೇ ಐಟಂ ಸ್ವತ್ತನ್ನು 2 ಮತ್ತು 3ನೇ ಪ್ರತಿವಾದಿಗಳು ತಮ್ಮ ಸ್ವಂತ ಸಂಪಾದನೆಯ ಹಣದಿಂದ ನಮ್ಮ ತಂದೆಯ ಹೆಸರಿಗೆ ಖರೀದಿಸಿದ್ದರು ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಯಾರಿಂದ ಯಾವಾಗ ಖರೀದಿಸಿದ್ದರು ಎಂದು ಗೊತ್ತಿಲ್ಲ. ಸದರಿ ಕ್ರಯಪತ್ರ ವಾದಾಗ ನಾನು ಹೋಗಿರಲಿಲ್ಲ.

ದಾವಾ ಅನುಸೂಚಿಯ 11 ಮತ್ತು 12 ನೇ ಐಟಂ ಸ್ವತ್ತುಗಳನ್ನು ನನ್ನ ತಮ್ಮಂದಿರು ಯಾರಿಂದ ಯಾವಾಗ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾ ಅನುಸೂಚಿಯ 13 ನೇ ಸ್ವತ್ತನ್ನು ಯಾರಿಂದ ಯಾವಾಗ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರವಾಗುವಾಗ ನಾನು ಹೋಗಿಲ್ಲ. ದಾವಾ ಅನುಸೂಚಿಯ 14 ನೇ ಸೈಟನ್ನು ಯಾವಾಗ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರವಾಗುವಾಗ ನಾನು ಹೋಗಿಲ್ಲ. ದಾವಾ ಅನುಸೂಚಿಯ 14 ನೇ ಸ್ವತ್ತನ್ನು 2 ನೇ ಪ್ರತಿವಾದಿ ಖರೀದಿಸಿದ್ದರು ಎಂದರೆ ಸರಿ. ಅವರು ತಮ್ಮ ಸ್ವಂತ ಸಂಪಾದನೆಯಿಂದ ಸದರಿ ಸ್ವತ್ತನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ದಿಃ18.07.2012 ರಂದು 2 ನೇ ಪ್ರತಿವಾದಿ ತನ್ನ ಪತ್ನಿ 7 ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ಕೊಟ್ಟಿದ್ದರು ಎಂದರೆ ಸರಿ. 7 ನೇ ಪ್ರತಿವಾದಿ ಸದರಿ ಸ್ವತ್ತನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. 8 ನೇ ಪ್ರತಿವಾದಿ ಸದರಿ ಸ್ವತ್ತಿನಲ್ಲಿ ಆರ್ ಸಿ ಸಿ ಮನೆ ಕಟ್ಟಿ ಅಲ್ಲಿಯೇ ವಾಸ ಇದ್ದಾರೆ ಎಂದರೆ ಸರಿ.

ಪಿತ್ರಾರ್ಜಿತ ಆಸ್ತಿಗಳಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಪಿತ್ರಾರ್ಜಿತ ಆಸ್ತಿಗಳೇ ಇರಲಿಲ್ಲ ಮತ್ತು ನಮ್ಮ ಒಟ್ಟು ಕುಟುಂಬದಿಂದ ಯಾವುದೇ ಆದಾಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳು ತಮ್ಮ ಸ್ವಂತ ಸಂಪಾಂದನೆಯಿಂದ ಎಲ್ಲಾ ಆಸ್ತಿಗಳನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳು ನನ್ನ ಮದುವೆ ಸಮಯದಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಒಡವೆಗಳನ್ನು ಕೊಟ್ಟಿದ್ದು ನನ್ನ ತಮ್ಮಂದಿರು ನನಗೆ ಮನೆ ಕಟ್ಟಿಸಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆಸ್ತಿಗಳ ಬೆಲೆ ಜಾಸ್ತಿ ಯಾದ ಕಾರಣ ಹಣ ಪಡೆದುಕೊಳ್ಳುವ

ಉದ್ದೇಶದಿಂದ ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಅನುಪಮ ಲಕ್ಷ್ಮಿ. ಬಿ)**
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.

ಪಿ.ಡಬ್ಲ್ಯೂ.1